**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 12

**CW**. 34

**ಸಾಕ್ಷಿಯ ಹೆಸರು –ಸೋಮಣ್ಣ**

**ತಂದೆಯ ಹೆಸರು –ಲೇ ಸಿದ್ದನಾಯಕ**

**ವಯಸ್ಸು –63 ವರ್ಷಗಳು**

ದಿನಾಂಕ 04–03–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ನಿವೃತ್ತ , ಎ ಎಸ್ ಐ**

**ವಾಸಸ್ಥಳ –ಮೈಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ದಿಃ 25–07–2017 ರಿಂದ ದಿಃ 30–05–2023 ರವರೆಗೆ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತೇನೆ.

ದಿಃ 07–07–2019 ರಂದು ಚಾಸಾ–38 ರವರ ಆದೇಶದಂತೆ ಈ ಪ್ರಕರಣದ ಮೃತನು 1 ನೇ ಆರೋಪಿಯೊಂದಿಗೆ ವಾಸವಾಗಿದ್ದ, ಮಂಡ್ಯ ಪಟ್ಟಣದ ಕಿರುಂದೂರು ಬಡಾವಣೆಯಲ್ಲಿದ್ದ ಮರಿಗೌಡರ ಮನೆಗೆ ಭೇಟಿ ನೀಡಿ, ಮೃತನ ಮಾವ ಮರಿಗೌಡ ಸ್ಥಳ ತೋರಿಸಿದ ಮೇರೆಗೆ ಚಾಸಾ–6 ಮತ್ತು 7 ರವರ ಸಮಕ್ಷಮ ಸ್ಥಳದಲ್ಲಿ ಬೆಳಗ್ಗೆ 10.00 ರಿಂದ 11.30 ಗಂಟೆವರೆಗೆ ಸ್ಥಳದ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–9 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ–9(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ–10 ಮತ್ತು

11 ಎಂದು ಗುರುತಿಸಲಾಗಿದೆ. ನಂತರ ಠಾಣೆಗೆ ಬಂದು ಪಂಚನಾಮೆಯನ್ನು ಚಾಸಾ–38 ರವರ ಮುಂದೆ ಹಾಜರು ಮಾಡಿರುತ್ತೇನೆ.

**ಪಾಟೀಸವಾಲುಃ– ಆರೋಪಿ ತರ ಪರ ಶ್ರೀ ಈ ಬಿ ಆರ್ ವಕೀಲರಿಂದಃ–**

ಪಂಚನಾಮೆಗೆ ಬರಲು ಪಂಚರಿಗೆ ನೋಟೀಸ್ ನೀಡಿಲ್ಲ ಎಂದರೆ ಸರಿ . ನಾನು ಮಂಡ್ಯದ ಮರಿಗೌಡರ ಮನೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–9 ರ ಪಂಚನಾಮೆಯನ್ನು, ನಿಪಿ–10 ಮತ್ತು 11 ರ ಫೋಟೋಗಳನ್ನು ನಮ್ಮ ಅನೂಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–9 ರ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.